# ಸ್ವಂತ ಸೂರಿನಲ್ಲಿ ಜಂಪಯ್ಯ

ಜಂಪಯ್ಯ ಹತ್ತಾರು ಬಾರಿ ಕಾಯಕನಾಥನಿಗೆ ಕೃತಜ್ಞತೆ ಸಲ್ಲಿಸಿದ. 'ಕಡೆಗೂ ನನ್ಗೆ ಒಂದು ಮನೆ ಅಂತ ಆಗುತ್ತಿದೆ. ಮಣ್ಣಿನದ್ದೋ, ಕಲ್ಲಿನದ್ದೋ ಮರದ್ದೋ ಅಂತೂ ನನ್ನದೇ ಅಂತ ಒಂದು ಸೂರು ಆಗುತ್ತಿದೆಯಲ್ವ? ಅದೇ ಸಂತೋಷ ಇದಕ್ಕೆ ಕಾರಣ ನೀನು ಕಾಯಕನಾಥ ಇನ್ನು ನಾನು ನೆಮ್ಮದಿಯಿಂದ ಇಲ್ಲೇ ಇದ್ದು ಬಿಡ್ತೀನಿ. ಇದೇ ನನ್ನ ನೆಲೆ' ಎಂದ.

ಕಾಯಕನಾಥನಿಗೆ ಅವನ ಮಾತಿನಿಂದ ನಗು ಬಂದಿತು.

'ಮನುಷ್ಯ ಮನೆ ಕಟ್ಟಿ ಅದೇ ತನ್ನ ನೆಲೆ ಎಂದು ಭಾವಿಸುತ್ತಾನೆ. ಆದರೆ ವಾಸ್ತವದಲ್ಲಿ ಅದು ಅವನ ನೆಲೆಯೇ? ಅದೇನು ಶಾಶ್ವತವೇ? ಅವನು ಒಂದಲ್ಲ ಒಂದು ದಿನ ಇಲ್ಲಿಂದ ತೆರಳಲೇ ಬೇಕು. ಆ ಪರಮ ಸತ್ಯದ ಅರಿವಿದ್ದೂ ಮನೆ ಕಟ್ಟಿ ಅದರಲ್ಲಿ ನೆಮ್ಮದಿ ಹುಡುಕುವ ಯತ್ನ ಮಾಡುತ್ತಾನೆ. ಆದರೆ 'ಅಲ್ಲಿರುವುದು ನಮ್ಮನೆ. ಇಲ್ಲಿ ಬಂದೆ ಸುಮ್ಮನೆ' ಎಂದು ದಾಸರು ಹೇಳಿದ್ದು ಸತ್ಯ ಅಲ್ಲವಾ?'

ಜಂಪಯ್ಯ ಪೆಚ್ಚಾದ.

'ಇರೋ ನಾಲ್ಕು ದಿನಕ್ಕೆ ಮನುಷ್ಯನದ್ದು ಎಷ್ಟೆಲ್ಲಾ ಆಸೆ, ವೇಷ, ಆಡಂಬರ ನಾಟಕ ಹುಟ್ಟುವಾಗಲೇ ಸಾವಿನ ಚೀಲ ಹೊತ್ತುಕೊಂಡೇ ಬರುತ್ತಾನೆ. ಆದರೂ ನಾವು ಮಾತ್ರ ಆ ಸತ್ಯವನ್ನು ಕಡೆಗಣಿಸಿ ಈ ಭ್ರಮೆಯ ಜಗತ್ತಿನ ಮೋಡಿಗೆ ಒಳಗಾಗಿ ಅದನ್ನು ಮರೀತೀವಿ. ಚಿರಂಜೀವಿಗಳೇನೋ ಅನ್ನುವ ರೀತಿಯಲ್ಲಿ

